ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಸಮಾಜ ಕಲ್ಯಾಣ ಇಲಾಖೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ಹಾಗೂ ನಿಲಯಾರ್ಥಿಗಳಿಗೆ ನೀಡುವ ಸೌಲಭ್ಯಗಳ ದರ ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ:-
1) ಸರ್ಕಾರದ ಆದೇಶ ಸಂಖ್ಯೆ: ಎಸ್‌ಡಬ್ಲ್ಯುಎಲ್ 163 ಎಸ್‌ಇಡಬ್ಲ್ಯು 80, ದಿನಾಂಕ: 11-01-1983.
2) ಸರ್ಕಾರದ ಆದೇಶ ಸಂಖ್ಯೆ: ಸಕಇ 352 ಪಕವಿ 2001, ದಿನಾಂಕ: 16-04-2002.
3) ಸರ್ಕಾರದ ಆದೇಶ ಸಂಖ್ಯೆ: ಸಕಇ 10 ಪಕವಿ 2009, ದಿನಾಂಕ: 31-03-2009.
4) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ ಸಕನಿ/ಇಡಿ 4 ಸಿಆರ್ 19/2013-14 ದಿನಾಂಕ 25-09-2013.

*****

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿನ ಆದೇಶ ದಿನಾಂಕ: 11-01-1983 ರಲ್ಲಿ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿನ ನಿಲಯಾರ್ಥಿಗಳ ವೈದ್ಯಕೀಯ ವೆಚ್ಚಕ್ಕಾಗಿ ಪ್ರತೀ ನಿಲಯಾರ್ಥಿಗೆ ವಾರ್ಷಿಕ ರೂ.1,000/- ಗಳನ್ನು ನೀಡಲು ಸರ್ಕಾರದ ಮಂಜೂರಾತಿ ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿನ ಆದೇಶ ದಿನಾಂಕ: 16-04-2002 ರಲ್ಲಿ ವಿದ್ಯಾರ್ಥಿ ನಿಲಯಗಳಲ್ಲಿರುವ ನಿಲಯಾರ್ಥಿಗಳಿಗೆ ನೀಡಲಾಗುತ್ತಿದ್ದ ಸಮವಸ್ತ್ರ, ಪಠ್ಯ ಪುಸ್ತಕ ಮತ್ತು ಲೇಖನ ಸಾಮಗ್ರಿಗಳ ದರಗಳನ್ನು ಪರಿಷ್ಕರಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿನ ಆದೇಶ ದಿನಾಂಕ: 31-03-2009 ರಲ್ಲಿ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿನ ಸ್ಕ್ಯಾವೆಂಜರ್ಸ್ ಮತ್ತು ದಿನಪತ್ರಿಕೆಗಳ ದರಗಳನ್ನು ಪರಿಷ್ಕರಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ-(4) ರಲ್ಲಿನ ಪತ್ರದಲ್ಲಿ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರು, ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು ಹಾಗೂ ನಿಲಯಾರ್ಥಿಗಳಿಗೆ ಪ್ರಸ್ತುತ ನೀಡುತ್ತಿರುವ ಸೌಲಭ್ಯಗಳ ದರಗಳು ಹಲವು ವರ್ಷಗಳ ಹಿಂದೆ ನಿಗಧಿಪಡಿಸಿದ್ದು, ಸದರಿ ದರಗಳನ್ನು ಪರಿಷ್ಕರಿಸುವಂತೆ, ಹಾಗೂ ಕೆಲವು ಹೊಸ ಸೌಲಭ್ಯಗಳನ್ನು ಒದಗಿಸುವಂತೆ, ಕೋರಿರುತ್ತಾರೆ.

ಮೇಲ್ಕಂಡ ಪ್ರಸ್ತಾವನೆಯನ್ನು ಪರಿಶೀಲಿಸಿ ಸಮಾಜ ಕಲ್ಯಾಣ ಇಲಾಖೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿನ ವಿವಿಧ ಸೌಲಭ್ಯಗಳಿಗೆ ನೀಡುತ್ತಿರುವ ದರಗಳನ್ನು ಪರಿಷ್ಕರಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ, ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಸಕಇ 172 ಪಕವಿ 2013, ಬೆಂಗಳೂರು, ದಿನಾಂಕ: 28-11-2014**

ಸಮಾಜ ಕಲ್ಯಾಣ ಇಲಾಖೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ಹಾಗೂ ನಿಲಯಾರ್ಥಿಗಳಿಗೆ ನೀಡಲಾಗುತ್ತಿರುವ ಸೌಲಭ್ಯಗಳ ದರಗಳನ್ನು ಅನುಬಂಧದಲ್ಲಿ ತೋರಿಸಿರುವಂತೆ ಈ ಕೂಡಲೇ ಜಾರಿಗೆ ಬರುವಂತೆ ಪರಿಷ್ಕರಿಸಿ ಆದೇಶಿಸಲಾಗಿದೆ.

---2

ಷರತ್ತುಗಳು:-

1) ಈ ದರ ಪರಿಷ್ಕರಣೆಗೆ ತಗಲುವ ವೆಚ್ಚವನ್ನು 2014-15 ನೇ ಸಾಲಿಗೆ ಪರಿಶಿಷ್ಟ ಜಾತಿಯ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನಕ್ಕೆ ರಾಜ್ಯವಲಯದ ಲೆಕ್ಕಶೀರ್ಷಿಕೆ: 4225-01-800-0-07 ರಲ್ಲಿನ "Providing two tier cots/beds/solar water heater/water filters/generators/library books/trunks/cooking vessels etc., for the Hostellers and Hostel Management" ರಡಿ ಕಾರ್ಯಕ್ರಮದಲ್ಲಿ ಒದಗಿಸಿರುವ ರೂ.80.00 ಕೋಟಿಗಳ ಅನುದಾನದಲ್ಲಿ ಭರಿಸತಕ್ಕದ್ದು. 2015-16 ನೇ ಸಾಲಿನಿಂದ ಈ ವೆಚ್ಚವನ್ನು ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ನಿರ್ವಹಣೆಗೆ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಆಯವ್ಯಯದ ಲೆಕ್ಕ ಶೀರ್ಷಿಕೆಗಳಡಿ ಅನುದಾನವನ್ನು ಒದಗಿಸಿಕೊಂಡು ಭರಿಸತಕ್ಕದು.

2) ಸದರಿ ಸೇವೆ/ಸರಕುಗಳ ಸಂಗ್ರಹಣೆಗೆ ಕರ್ನಾಟಕ ಪಾರದರ್ಶಕತೆ ಅಧಿನಿಯಮವನ್ನು ಅನುಸರಿಸತಕ್ಕದ್ದು.

ಈ ಆದೇಶವನ್ನು ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ-2013 ರನ್ವಯ ಸನ್ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ದಿನಾಂಕ: 10-10-2014 ರಂದು ನಡೆದ ಅಭಿವೃದ್ಧಿ ಪರಿಷತ್ ಸಭೆಯಲ್ಲಿ ನೀಡಿರುವ ಅನುಮೋದನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎನ್. ನರಸಿಂಹಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ-1
ಸಮಾಜ ಕಲ್ಯಾಣ ಇಲಾಖೆ

ಪ್ರತಿಯನ್ನು:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ,ಬೆಂಗಳೂರು.
3. ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಬೆಂಗಳೂರು.
5. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ.
6. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾ ಪಂಚಾಯತ್ ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ.
7. ರಾಜ್ಯದ ಎಲ್ಲಾ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳಿಗೆ/ಜಿಲ್ಲಾ ಪರಿಶಿಷ್ಟ ಕಲ್ಯಾಣಾಧಿಕಾರಿಗಳಿಗೆ.
8. ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
9. ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ.
10. ಕಛೇರಿ ಪ್ರತಿ/ಇತರೆ.

(ಕ್ರ.ಸಂ. 5 ರಿಂದ 7 ರವರೆಗೆ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಮುಖಾಂತರ).

# ಅನುಬಂಧ

| ಕ್ರ ಸಂ. | ಸೌಲಭ್ಯಗಳ ವಿವರ | ಈ ಹಿಂದೆ ಜಾರಿಗೊಳಿಸಿದ್ದ ಸರ್ಕಾರಿ ಆದೇಶ ಸಂಖ್ಯೆ ಮತ್ತು ದಿನಾಂಕ | ಹಾಲಿ ಜಾರಿಯಲ್ಲಿರುವ ದರ (ರೂ.ಗಳಲ್ಲಿ) | ಪರಿಷ್ಕರಿಸಿದ ದರ (ರೂ.ಗಳಲ್ಲಿ) |
|---|---|---|---|---|
| 1 | **ಹಾಸಿಗೆ, ಹೊದಿಕೆ** (ಪ್ರತಿ ವಿದ್ಯಾರ್ಥಿಗೆ ಮೂರು ವರ್ಷಕ್ಕೊಮ್ಮೆ) ಹಾಸಿಗೆ,ಹೊದಿಕೆ ಅಂದರೆ ಜಮಖಾನ, ಬೆಡ್ ಸ್ಪ್ರೆಡ್ ಹಾಗೂ ಹೊದಿಕೆ/ಬೆಡ್ ಶೀಟ್/ಚದ್ದರ್, ದಿಂಬು ಮತ್ತು ದಿಂಬಿನ ಕವರ್ | | | |
| | ಅ)ಮೆ.ಪೂ.ವಿ.ನಿ.ಗಳು | ಸಕಇ 353 ಪಕವಿ 2001 ದಿನಾಂಕ 16.04.2002 | 400.00 | 800.00 |
| | ಆ)ಮೆ.ನಂ.ವಿ.ನಿ.ಗಳು | ಇಲ್ಲ | ಇಲ್ಲ | 1000.00 |
| 2 | **ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯದ ನಿಲಯಾರ್ಥಿಗಳಿಗೆ ಪಠ್ಯ ಪುಸ್ತಕ ಮತ್ತು ಲೇಖನ ಸಾಮಾಗ್ರಿ** (ಪ್ರತಿ ವಿದ್ಯಾರ್ಥಿಗೆ ವಾರ್ಷಿಕ) ಪಠ್ಯ ಪುಸ್ತಕ, ನೋಟ್ ಬುಕ್ ಗಳು, ಗ್ರಾಫ್ ನೋಟ್ ಬುಕ್, ಜಾಮಿತ್ರಿ ಬಾಕ್ಸ್ ಇತ್ಯಾದಿ (ನಿಲಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿರುವ ಶಾಲೆಗಳಲ್ಲಿ ಶಿಕ್ಷಣ ಇಲಾಖೆಯಿಂದ ಪಡೆದ ಪಠ್ಯ ಪುಸ್ತಕ ಮತ್ತು ಲೇಖನ ಸಾಮಾಗ್ರಿಗಳನ್ನು ಹೊರತುಪಡಿಸಿ) | ಸಕಇ 353 ಪಕವಿ 2001 ದಿನಾಂಕ 16.04.2002 | 250.00 | 400.00 |
| 3 | **ಕೆಟ್ಟು ಹೋದ ಉಪಕರಣಗಳ ದುರಸ್ಥಿ/ಬದಲಾವಣೆಗೆ** (ಪ್ರತಿ ಮೆಟ್ರಿಕ್ ಪೂರ್ವ ಹಾಗೂ ನಂತರದ ವಿದ್ಯಾರ್ಥಿ ನಿಲಯಕ್ಕೆ ವಾರ್ಷಿಕ) | | | |
| | ಅ) 100 ಸಂಖ್ಯಾ ಬಲದವರೆಗಿನ ವಿದ್ಯಾರ್ಥಿನಿಲಯಗಳು | ಇಲ್ಲ | ಇಲ್ಲ | 5000.00 |
| | ಆ)100 ಸಂಖ್ಯಾ ಬಲಕ್ಕಿಂತ ಹೆಚ್ಚಿಗೆ ಇರುವ ವಿದ್ಯಾರ್ಥಿನಿಲಯಗಳು | ಇಲ್ಲ | ಇಲ್ಲ | 7500.00 |
| 4 | **ಶೌಚಾಲಯ/ನಿಲಯದ ಸ್ವಚ್ಛತೆಗಾಗಿ ಖರೀದಿಸಬೇಕಾದ ಸಾಮಾಗ್ರಿ ವೆಚ್ಚ** [ಕಬ್ಬಿಣದ ಬಕೆಟ್, ಪೊರಕೆ, ಬ್ಲೀಚಿಂಗ್ ಪೌಡರ್, ಪೆನಾಯಿಲ್ ಖರೀದಿ, ಇತ್ಯಾದಿ)ಪ್ರತಿ ವಿದ್ಯಾರ್ಥಿನಿಲಯಕ್ಕೆ ವಾರ್ಷಿಕ ವೆಚ್ಚ | | | |
| | ಅ) 100 ಸಂಖ್ಯಾ ಬಲದವರೆಗಿನ ವಿದ್ಯಾರ್ಥಿನಿಲಯಗಳು | ಇಲ್ಲ | ಇಲ್ಲ | 750.00 |
| | ಆ)100 ಸಂಖ್ಯಾ ಬಲಕ್ಕಿಂತ ಹೆಚ್ಚಿಗೆ ಇರುವ ವಿದ್ಯಾರ್ಥಿನಿಲಯಗಳು | ಇಲ್ಲ | ಇಲ್ಲ | 1000.00 |
| 5 | **ಶೌಚಾಲಯದ ಸ್ವಚ್ಛತೆ** ಪ್ರತಿ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಕ್ಕೆ | | | |
| | ಅ) 100 ಸಂಖ್ಯಾ ಬಲದವರೆಗಿನ ವಿದ್ಯಾರ್ಥಿನಿಲಯಗಳು | ಸಕಇ 10 ಪಕವಿ 2009 ದಿನಾಂಕ 31.03.2009 | 600.00 | 2000.00 |
| | ಆ)100 ಸಂಖ್ಯಾ ಬಲಕ್ಕಿಂತ ಹೆಚ್ಚಿಗೆ ಇರುವ ವಿದ್ಯಾರ್ಥಿನಿಲಯಗಳು | | 600.00 | 2500.00 |

| | | | | |
|---|---|---|---|---|
| 6 | ಸೆಪ್ಟಿಕ್ ಟ್ಯಾಂಕ್ ಸ್ವಚ್ಛಗೊಳಿಸಲು (ಪ್ರತಿ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಕ್ಕೆ ವಾರ್ಷಿಕ ವೆಚ್ಚ (ಮಹಾ ನಗರ ಪಾಲಿಕೆ/ ನಗರ ಪಾಲಿಕೆ/ ನಗರ ಸಭೆ/ಪುರಸಭೆಗಳಲ್ಲಿರುವ ಯಂತ್ರಗಳ ಮೂಲಕ ಸ್ವಚ್ಛಗೊಳಿಸತಕ್ಕದ್ದು | ಇಲ್ಲ | 0.00 | 5000.00 |
| 7 | ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಲ್ಲಿರುವ ಬಾಲಕರ ಕ್ಷೌರಕ್ಕಾಗಿ (ಪ್ರತಿ 2 ತಿಂಗಳಿಗೊಮ್ಮೆ ರೂ. 30.00 ರಂತೆ ವಾರ್ಷಿಕ 5 ಬಾರಿ) | ಸಕಇ 352 ಪಕವಿ 2001 ದಿನಾಂಕ 16.04.2002 | 60.00 | 150.00 |
| 8 | ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಲ್ಲಿರುವ ವಿದ್ಯಾರ್ಥಿಗಳ ವೈದ್ಯಕೀಯ ವೆಚ್ಚ ಭರಿಸಲು (ಪ್ರತಿ ವಿದ್ಯಾರ್ಥಿ ನಿಲಯಕ್ಕೆ ವಾರ್ಷಿಕ) | | | |
| | ಅ)100 ಸಂಖ್ಯಾಬಲದವರೆಗಿನ ವಿದ್ಯಾರ್ಥಿನಿಲಯಗಳು | ಎಸ್‌ಡಬ್ಲ್ಯೂಎಲ್ ಎಸ್‌ಇಡಬ್ಲ್ಯೂ 80 ದಿನಾಂಕ 11.01.1983 | 1000.00 | 5000.00 |
| | ಆ)100 ಸಂಖ್ಯಾಬಲಕ್ಕಿಂತ ಹೆಚ್ಚಿಗೆ ಇರುವ ವಿದ್ಯಾರ್ಥಿನಿಲಯಗಳು | | | 8000.00 |
| 9 | ದಿನ ಪತ್ರಿಕೆ/ವಾರ/ಮಾಸ ಪತ್ರಿಕೆಗಳ ವೆಚ್ಚ (ಪ್ರತಿ ವಿದ್ಯಾರ್ಥಿ ನಿಲಯಕ್ಕೆ ವಾರ್ಷಿಕ ವೆಚ್ಚ) | | | |
| | ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು<br>1 ರಾಜ್ಯ ಮಟ್ಟದ ಕನ್ನಡ ದಿನಪತ್ರಿಕೆ -1<br>2 ಕಸ್ತೂರಿ ಮಾಸಿಕ ಡೈಜೆಸ್ಟ್-1<br>3. ದಿಕ್ಸೂಚಿ, ಸ್ಪರ್ಧಾಚೈತ್ರ, ಇತ್ಯಾದಿ ವಾರ ಪತ್ರಿಕೆಗಳು | ಸಕಇ 10 ಪಕವಿ 2009 ದಿನಾಂಕ 31.03.2009 | 2500.00 | 3000.00 |
| | ಮೆಟ್ರಿಕ್ ನಂತರ ವಿದ್ಯಾರ್ಥಿ ನಿಲಯಗಳು<br>1 ರಾಜ್ಯ ಮಟ್ಟದ ಕನ್ನಡ ದಿನಪತ್ರಿಕೆ -1<br>2 ರಾಜ್ಯ ಮಟ್ಟದ ಇಂಗ್ಲೀಷ್ ದಿನಪತ್ರಿಕೆ -1<br>3 Competition Success Review /Wizard/Employment News<br>4. ದಿಕ್ಸೂಚಿ, ಸ್ಪರ್ಧಾಚೈತ್ರ. | | 2500.00 | 3500.00 |
| 10 | ಮೆಟ್ರಿಕ್ ಪೂರ್ವ ಮತ್ತು ನಂತರದ ವಿದ್ಯಾರ್ಥಿ ನಿಲಯಕ್ಕೆ ಕ್ರೀಡಾ ಸಾಮಗ್ರಿಗಳು (ಪ್ರತಿ ನಿಲಯಕ್ಕೆ ವಾರ್ಷಿಕ ವೆಚ್ಚ) (ಎರಡು ವರ್ಷಕ್ಕೊಮ್ಮೆ)<br>ಕೇರಂ ಬೋರ್ಡ್<br>ಚೆಸ್<br>ಷಟಲ್ ಬ್ಯಾಡ್‌ಮಿಂಟನ್<br>ಬಾಲ್ ಬ್ಯಾಡ್‌ಮಿಂಟನ್ ನೆಟ್ ನೊಂದಿಗೆ<br>ವಾಲಿ ಬಾಲ್<br>ಟೆಬಲ್ ಟೆನ್ನಿಸ್<br>ಟ್ರೋಬಾಲ್ (ಬಾಲಕಿಯರಿಗೆ)<br>ಟೆನ್ನಿಕಾಯ್ಟ್ (ಬಾಲಕಿಯರಿಗೆ) | ಇಲ್ಲ | 0.00 | 20,000.00 |

ಸಕಇ 172 ಪಕವಿ 2013.

(ಎನ್.ನರಸಿಂಹಮೂರ್ತಿ).
ಸರ್ಕಾರದ ಅಧೀನ ಕಾರ್ಯದರ್ಶಿ-1.
ಸಮಾಜ ಕಲ್ಯಾಣ ಇಲಾಖೆ.

ಕರ್ನಾಟಕ ಸರ್ಕಾರ

ಸಂಖ್ಯೆ: ಸಕಇ 172 ಪಕವಿ 2013

ಕರ್ನಾಟಕ ಸರ್ಕಾರ ಸಚಿವಾಲಯ
ವಿಕಾಸಸೌಧ,
ಬೆಂಗಳೂರು, ದಿನಾಂಕ: 17-07-2015.

**ತಿದ್ದುಪಡಿ ಆದೇಶ**

ಸಮಾಜ ಕಲ್ಯಾಣ ಇಲಾಖೆಯ ಪರಿಶಿಷ್ಟ ಜಾತಿಯ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಮತ್ತು ನಿಲಯಾರ್ಥಿಗಳಿಗೆ ನೀಡುವ ಸೌಲಭ್ಯಗಳ ದರ ಪರಿಷ್ಕರಣೆ ಸಂಬಂಧವಾಗಿ ಹೊರಡಿಸಿರುವ ಸಮಸಂಖ್ಯೆಯ ದಿನಾಂಕ: 28-11-2014 ರ ಆದೇಶದ ಅನುಬಂಧದ ಕ್ರಮ ಸಂಖ್ಯೆ (4) ರಲ್ಲಿ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಶೌಚಾಲಯ/ನಿಲಯದ ಸ್ವಚ್ಛತೆಗಾಗಿ ಖರೀದಿಸಬೇಕಾದ ಸಾಮಗ್ರಿ ವೆಚ್ಚ (ಕಬ್ಬಿಣದ ಬಕೆಟ್, ಪೊರಕೆ, ಬ್ಲೀಚಿಂಗ್ ಪೌಡರ್, ಫಿನಾಯಿಲ್ ಖರೀದಿ, ಇತ್ಯಾದಿ) ಪ್ರತಿ ವಿದ್ಯಾರ್ಥಿ ನಿಲಯಕ್ಕೆ ವಾರ್ಷಿಕ ವೆಚ್ಚ ಎಂಬುದರ ಬದಲಾಗಿ 'ಮಾಹೆಯಾನ ವೆಚ್ಚ' ಎಂದು ತಿದ್ದುಪಡಿ ಮಾಡಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

17/7/2015
(ಗಿರಿಜಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಸಮಾಜ ಕಲ್ಯಾಣ ಇಲಾಖೆ.

ಇವರಿಗೆ:

1) ಮಹಾಲೇಖಪಾಲರು (ಎ & ಇ ಲೆಕ್ಕ ಪರಿಶೋಧನೆ-1, 2), ಕರ್ನಾಟಕ, ಬೆಂಗಳೂರು.
2) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
3) ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
4) ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಬೆಂಗಳೂರು.
5) ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ.
6) ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ.
7) ರಾಜ್ಯದ ಎಲ್ಲಾ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳಿಗೆ/ ಜಿಲ್ಲಾ ಪರಿಶಿಷ್ಟ-ಕಲ್ಯಾಣಾಧಿಕಾರಿಗಳಿಗೆ.
8) ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
9) ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ.
10) ಶಾಖಾ ರಕ್ಷಾ ಕಡತ. ಹೆಚ್ಚುವರಿ ಪ್ರತಿಗಳು-03.
(ಕ್ರಮ ಸಂಖ್ಯೆ: 5-7 ರವರೆಗೆ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಮುಖಾಂತರ).

ಸಂ. ಸಕನಿ/ಇಡಿ 4/ಸಿಆರ್ 19/2013-14

ಆಯುಕ್ತರ ಕಾರ್ಯಾಲಯ
ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು
ದಿ: 3-10-2015

ರಾಜ್ಯದ ಎಲ್ಲಾ ಜಿಲ್ಲೆಗಳ ಜಸಕಅ/ಜಸಕ ನಿರ್ದೇಶಕರುಗಳು
ಸಮಾಜ ಕಲ್ಯಾಣ ಇಲಾಖೆ

ಈ ಮೇಲಿನ ಸರ್ಕಾರದ ತಿದ್ದುಪಡಿ ಆದೇಶಕ್ಕನುಗುಣವಾಗಿ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.

ಆಯುಕ್ತರ ಪರವಾಗಿ,
ಸಮಾಜ ಕಲ್ಯಾಣ ಇಲಾಖೆ,
ಬೆಂಗಳೂರು.